

ಜಾಮಾ ಮಸ್ಜಿದ್



ಪಾದಗಳು ಒರೆಯುವ ಕಥೆಯ
ಕಲ್ಲು ಆಲಿಸುವುದೇ?

ಬೀರಿ ತನ್ನನ್ನು ಪರಿಚಯಿಸಿಕೊಂಡ. ಮಂದೀಪ್ ಏನೂ ಮಾತನಾಡದೆ ವಿನಮ್ರನಾಗಿ ನಕ್ಕ. 'ಒಂದು ವರ್ಷದಲ್ಲಿ ಇದು ನನ್ನ ಮೂರನೆಯ **'coming out' conversation'**. ನಾನು ಗೇ ಅಂತ ಸ್ಪಷ್ಟವಾಗಿ ಹೇಳಿದರೂ ನಮ್ಮಮ್ಮ ಅದನ್ನು ಅರಗಿಸಿಕೊಳ್ಳಲಾಗದೆ ಒದ್ದಾಡುತ್ತಲೇ ಇದ್ದಾರೆ. ಕಾಲಕಾಲಕ್ಕೆ, ಏನಾದರೂ ಬದಲಾವಣೆ ಇದೆಯೇ ಎಂದು ವಿಚಾರಿಸಲು ಫೋನ್ ಮಾಡಿ ವಿಚಾರಿಸುತ್ತಾರೆ' ಎಂದ. ಮುಂದಿನ ವಾರ ಮತ್ತೊಬ್ಬ ಗೆಳೆಯನಿಗೆ ತಾಜ್ ತೋರಿಸಲು ಆಗ್ರಾಗೆ ಹೋಗುತ್ತಿರುವವರೆಂದು, ನಾನು ಬಿಡುವಾಗಿದ್ದರೆ ಜೊತೆಗೆ ಬರಲೇಬೇಕೆಂದು ಹೇಳಿ ರಾಹುಲ್ ಆಫೀಸಿಗೆ ಹೊತ್ತಾಯಿತೆಂದು ಹೊರಟ. ಅವನ ನೀಲಿ ಬಣ್ಣದ ಜೀನ್ಸನ್ನು ಹತ್ತಿರದಿಂದ ಗಮನಿಸಿ **'this needs a good wash..'** ಎಂದು ಆಪ್ತವಾಗಿ ಹೇಳಿ ಮಂದೀಪ್ ಅವನನ್ನು ಬೀಳ್ಕೊಟ್ಟ. 'ರಾಹುಲ್ ಇಸ್ ಎನ್ ಆರ್ಕಿಟೆಕ್ಟ್.. ನನ್ನ ಮನೆ ಡಿಸೈನ್ ಮಾಡಿರುವುದು ಅವನೇ' ಎಂದ.

## ಜಾಮಾ ಮಸ್ಜಿದ್

ಫೇಸ್‌ಬುಕ್ಕಿನಲ್ಲಷ್ಟೇ ಪರಿಚಯವಿದ್ದ ಚೈತ್ರಿಕಾ ಭೇಟಿಯಾಗಲು ಮರುದಿನ ಸಿಕ್ಕಿದಳು. ನಾವು ಚಾಂದಿನಿ ಚೌಕ್ ಬಳಿಯಿರುವ ಪ್ರಖ್ಯಾತ ಜಾಮಾ ಮಸ್ಜಿದ್ ತಲುಪಿದಾಗ ಮಧ್ಯಾಹ್ನ ಬಿಸಿಲೇರಿ ಮಸ್ಜಿದ್ದಿನ ಮೆಟ್ಟಿಲುಗಳು ಕೆಂಡದಂತೆ ಸುಡುತ್ತಿದ್ದವು. ಮೆಟ್ಟಿಲುಗಳನ್ನೇರಿ ಬೃಹದಾಕಾರವಾದ ಮುಖ್ಯದ್ವಾರದಿಂದ ಒಳಗೆ ಹೋದಾಗ ಎತ್ತರದ ಕಲ್ಲುಬೆಂಚಿನ ಮೇಲೆ ನಿಂತ ಹುಡುಗನೊಬ್ಬ ಸುಡುತ್ತಿದ್ದ ಕಲ್ಲುಹಾಸಿನ ನೆಲದ ಮೇಲೆ ಚೊಂಬಿನಿಂದ ತಣ್ಣನೆಯ ನೀರೆರೆಚುತ್ತಿದ್ದ. ನೆಲದ ಮೇಲೆ ಬಿದ್ದ ನೀರು ಕ್ಷಣಾರ್ಧದಲ್ಲಿ ಆವಿಯಾಗುತ್ತಿತ್ತು. ಬಾಗಿಲಲ್ಲಿ ನಿಂತಿದ್ದ ಮೌಲ್ವೀ ಸಾಹೇಬ ನನ್ನ ಗೆಳತಿಯ ಮಂಡಿಯ ಕೆಳಗಿನ ಕಾಲು ಕಾಣುತ್ತಿದೆಯೆಂದು ಒಳಗೆ ಬಿಡಲು ನಿರಾಕರಿಸಿದ!

ಸುಡುತ್ತಿರುವ ಪ್ರಾಂಗಣದಲ್ಲಿ ನಡೆದಾಡಲು ಅಲ್ಲಲ್ಲಿ ಉದ್ದನೆಯ ಜಮ್ಖಾನ ಹಾಸಿದ್ದರು. ಪ್ರಾಂಗಣದ ಮಧ್ಯದಲ್ಲಿ ಯಾತ್ರಿಗಳು ಕೈಕಾಲು ತೊಳೆಯಲು ಅಗಲವಾದ ನೀರಿನ ಹೊಂಡವಿತ್ತು. ಅದರ ಸುತ್ತ ಕೂತ ಗಂಡುಹೆಣ್ಣುಗಳು ಕಾಲುಗಳನ್ನು ನೀರಿನಲ್ಲಿಟ್ಟು ದಣಿವಾರಿಸಿಕೊಳ್ಳುತ್ತಿದ್ದರು. ಮೌಲ್ವಿಸಾಹೇಬ ಕೊಂಚ ಹೊತ್ತು ಕಣ್ಮರೆಯಾದ. ಮುಖ್ಯದ್ವಾರದಲ್ಲಿ ನಿಂತಿದ್ದ ಕಿರಿಯ ವಯಸ್ಸಿನ ಹುಡುನೊಬ್ಬನನ್ನು ಒಳಗೆ ಬಿಡುವಂತೆ ಕೇಳಿದಾಗ ಅವನು ಸಮ್ಮತಿಸಿದ.



ಈ ವಿಳಾಸದ ಗುರುತ ಹೇಳುವುದು ಹೇಗೆ....

ನಾವಿಬ್ಬರು ಮಸ್ಜಿದ್ದಿನ ಎತ್ತರದ ಮಿನಾರಿಗೆ ಹೋಗಲು ಟಿಕೆಟ್ ಪಡೆದು ಮೆಟ್ಟಿಲುಗಳನ್ನು ಏರುತ್ತಿದ್ದೆವು. ಸುರುಳಿ ಸುರುಳಿಯಾಗಿದ್ದ ಮೆಟ್ಟಿಲುಗಳು ಒಂದು ಬಾರಿಗೆ ಒಬ್ಬ ವ್ಯಕ್ತಿಯಷ್ಟೇ ಹತ್ತಬಹುದಾದಷ್ಟು ಇಕ್ಕಟ್ಟಾಗಿತ್ತು. ಮತ್ತೊಬ್ಬರು ಮೇಲಿನಿಂದ ಇಳಿದು ಬರುತ್ತಿದ್ದರೆ ನಾವು ಗೋಡೆಗೆ ಆದಷ್ಟೂ ಆತುಕೊಂಡು ಅವರಿಗೆ ಜಾಗಮಾಡಿಕೊಡಬೇಕಿತ್ತು. ಸುಡುವ ಮಧ್ಯಾಹ್ನದಲ್ಲೂ ಮಿನಾರಿನಲ್ಲಿ ಕತ್ತಲಾವರಿಸಿತ್ತು. ಬಿಸಿಲಲ್ಲಿ ಓಡಾಡಿ ಬಂದವರ ಬೆವರು, ಆಗಷ್ಟೇ ನೀರಿನ ಹೊಂಡದಲ್ಲಿ ಮೈಕೈ ತೊಳೆದು ಬಂದವರ ಒದ್ದೆ ಕೂದಲು, ಅತ್ತರ್ ಪೂಸಿದ ಮೈಗಂಧ, ದಟ್ಟ ಕಾಡಿಗೆ ಹಚ್ಚಿದ ಕಣ್ಣುಗಳು, ಕೆಂಪು ನೇಯ್ಲ್ ಪಾಲಿಶ್ ಹಾಕಿದ್ದ ಹುಡುಗರು, ಮೆಟ್ಟಿಲೇರುತ್ತಿದ್ದ ಹೆಂಗಸರ ಉಸಿರಿನ ವಾಸನೆ.. ಹೀಗೆ ಇವೆಲ್ಲದರ ನಡುವೆ ಹತ್ತಿ ಮಿನಾರಿನ ಮೇಲಕ್ಕೆ ತಲುಪಿದೆವು.

ಆ ಇಕ್ಕಟ್ಟಿನ ಜಾಗದಲ್ಲಿ ಪ್ರೇಮಿಗಳು ಸೆಲ್ಫೀ ತೆಗೆದುಕೊಂಡಾಗ ಹೇಗಾದರೂ ಫ್ರೇಮಿನಲ್ಲಿ ಮತ್ತೊಂದು ಮುಖ, ಮತ್ತೊಂದು ಕೈ, ಮತ್ತೊಂದು ಕಣ್ಣು ಬಂದೇ ಬಿಡುತ್ತಿತ್ತು. ಮಿನಾರಿನ ಮೇಲೆ ನಿಂತು ಕೆಳಗೆ ನೋಡಿದಾಗ ಪ್ರಾಂಗಣದಲ್ಲಿ ಹಾಸಿದ್ದ ಜಮ್ಖಾನ ನೆಲದ ಮೇಲೆ ಬರೆದ ಕೆಂಪು ಗೆರೆಗಳಂತೆ ಕಾಣುತ್ತಿದ್ದವು. ಮಿನಾರಿನ ದಟ್ಟ ನೆರಳು ನೆಲದ ಮೇಲೆ ಬಿದ್ದಿತ್ತು. ಮುಖ್ಯದ್ವಾರದಿಂದ ನೀರಿನ ಹೊಂಡಕ್ಕೆ, ಅಲ್ಲಿಂದ ಮಸ್ಜಿದ್ದಿಗೆ ನಡೆದಾಡುತ್ತಿದ್ದ ಜನರು ಮೇಲಿಂದ ಆಗಷ್ಟೇ ಹುಟ್ಟಿದ ಮಕ್ಕಳಂತೆ ಕಾಣುತ್ತಿದ್ದರು. ಮುಖ್ಯದ್ವಾರದಿಂದ ಹೊರಕ್ಕೆ ಟಾಂಗಾಗಳು, ಆಟೋ ರಿಕ್ಷಾಗಳು ರಾಶಿ ರಾಶಿ ಯಾತ್ರಿಗಳನ್ನು